# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **104** |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 09-12-2024 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ವಿದ್ಯುತ್ ಸಂಬಂಧಿ ದುರ್ಘಟನೆಗಳಲ್ಲಿ ಮರಣ ಹೊಂದಿದ ಹಾಗೂ ಗಾಯಗೊಂಡಿರುವ ಪ್ರಕರಣಗಳೆಷ್ಟು; ಇದಕ್ಕೆ ಕಾರಣಗಳೇನು; ಈ ಕುರಿತು ಎಷ್ಟು ಪ್ರಕರಣಗಳಲ್ಲಿ ಇಲಾಖೆಯಿಂದ ಪರಿಹಾರ ಧನವನ್ನು ವಿತರಿಸಲಾಗಿದೆ; | ಕಳೆದ ಮೂರು ವರ್ಷಗಳಲ್ಲಿ (2021-22, 2022-23 ಮತ್ತು 2023-24) ಕ.ವಿ.ಪ್ರ.ನಿ.ನಿ ಮತ್ತು ಮಂಗಳೂರು ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ವಿದ್ಯುತ್ ಅವಘಡದಿಂದ ಮರಣ ಹೊಂದಿದ ಪ್ರಕರಣಗಳು, ಗಾಯಗೊಂಡಿರುವ ಪ್ರಕರಣಗಳು, ಸದರಿ ದುರ್ಘಟನೆಗಳಿಗೆ ಕಾರಣಗಳು ಮತ್ತು ಪರಿಹಾರ ಧನ ವಿತರಿಸಲಾಗಿರುವ ಪ್ರಕರಣಗಳ ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ. |
| ಆ) | ಯಾವುದೇ ವಿದ್ಯುತ್ ವಿತರಣಾ ಜಾಲಗಳ ತಂತಿಗಳು ಸಾರ್ವಜನಿಕ ರಸ್ತೆ, ಶಾಲೆ, ಅಂಗನವಾಡಿ ಹಾಗೂ ಇತರ ಕಛೇರಿಗಳ ಮೇಲೆ ಹಾದು ಹೋಗುವ ಸಂದರ್ಭದಲ್ಲಿ ತಂತಿಗಳ ಅಡಿಯಲ್ಲಿ ಸುರಕ್ಷಿತ ಗಾರ್ಡ್‌ಗಳನ್ನು ಅಳವಡಿಸಲಾಗಿದೆಯೇ; ಅಳವಡಿಸದಿದ್ದರೆ ಕಾರಣಗಳೇನು; ಯಾವಾಗ ಅಳವಡಿಸಲು ಕ್ರಮ ವಹಿಸಲಾಗುವುದು; (ವಿವರ ನೀಡುವುದು) | ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ವಿದ್ಯುತ್ ವಿತರಣಾ ಜಾಲದಲ್ಲಿ ಸಾರ್ವಜನಿಕ ಸ್ಥಳಗಳ ರಸ್ತೆ/ಬೀದಿಯ ಅಡ್ಡವಾಗಿ ಹಾದುಹೋಗಿರುವ ವಿದ್ಯುತ್ ವಾಹಕಗಳ ಅಡಿಯಲ್ಲಿ ಸುರಕ್ಷಿತ ಗಾರ್ಡ್‌ಗಳನ್ನು ಅಳವಡಿಸಲಾಗುತ್ತಿದೆ.<br>ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಶಾಲೆ, ಅಂಗನವಾಡಿ ಹಾಗೂ ಕಛೇರಿಗಳ ಮೇಲೆ ವಿದ್ಯುತ್ ವಾಹಕವು ಹಾದು ಹೋಗುವ ಸಂದರ್ಭದಲ್ಲಿ ವಿದ್ಯುತ್ ವಿತರಣಾ ವಾಹಕಗಳನ್ನು ಸುರಕ್ಷತಾ ದೃಷ್ಟಿಯಿಂದ ಸ್ಥಳಾಂತರಿಸಲಾಗುತ್ತಿದೆ. |
| ಇ) | ಸಂಭಾವ್ಯ ವಿದ್ಯುತ್ ಸಂಬಂಧಿ ದುರ್ಘಟನೆಗಳ ಬಗ್ಗೆ ಲಭ್ಯವಿರುವ ಮಾಹಿತಿಯನ್ನು ಇಲಾಖೆಗೆ ನೀಡಿದ್ದಲ್ಲಿ ಇಲಾಖೆ ಯಾವ ಕ್ರಮ ವಹಿಸುತ್ತಿದೆ; (ವಿವರ ನೀಡುವುದು) | **<u>ಕ.ವಿ.ಪ್ರ.ನಿ.ನಿ.:</u>**<br>ಕ.ವಿ.ಪ್ರ.ನಿ.ನಿ. ವ್ಯಾಪ್ತಿಯಲ್ಲಿ ವಿದ್ಯುತ್ ಸಂಬಂಧಿತ ದುರ್ಘಟನೆಗಳನ್ನು ತಪ್ಪಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ:<br>• ವಿದ್ಯುತ್ ಪ್ರಸರಣ ಮಾರ್ಗದಿಂದ ನೆಲಕ್ಕೆ ಅಂತರ ಕಡಿಮೆ ಇರುವ ಸ್ಥಳಗಳು ಕಂಡುಬಂದಲ್ಲಿ ವಾಹಕದಿಂದ ನೆಲಕ್ಕೆ ಸುರಕ್ಷತಾ ಅಂತರ ಹೆಚ್ಚಿಸಲು ಮಧ್ಯಂತರ ಗೋಪುರಗಳನ್ನು ಅಳವಡಿಸಲಾಗುತ್ತಿರುತ್ತದೆ.<br>• ರೋಡ್ ಕ್ರಾಸಿಂಗ್ ಗೋಪುರಗಳಲ್ಲಿ ಹಾಗೂ ಇತರೆ ಸ್ಥಳಗಳಲ್ಲಿ ಸಾರ್ವಜನಿಕರ ಸುರಕ್ಷತೆಗಾಗಿ ಅವಶ್ಯವಿರುವ ಗೋಪುರಗಳಲ್ಲಿ ಡಬಲ್ ಸ್ಟ್ರಿಂಗ್ ಇನ್ಸುಲೇಟರ್‌ಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |

| | | |
|---|---|---|
| | | • ಮಾರ್ಗಗಳ ವಾಹಕಗಳು ಹಳೆಯದಾದಲ್ಲಿ ಹೊಸ ವಾಹಕಗಳ ಅಳವಡಿಕೆಗೆ ಕ್ರಮ ವಹಿಸಲಾಗುತ್ತಿದೆ.<br>• ವಿದ್ಯುತ್ ಪ್ರಸರಣ ಮಾರ್ಗಗಳ ಅಡಿಯಲ್ಲಿ / ಕಾರಿಡಾರಿನಲ್ಲಿ ಹೊಸ ಮನೆ / ಕಟ್ಟಡಗಳ ನಿರ್ಮಾಣ ಮಾಡುವುದು ಹಾಗೂ ಮರಗಳನ್ನು ನೆಡುವುದು ಕಂಡುಬಂದಲ್ಲಿ ಮನೆ / ಹೊಲದ ಮಾಲೀಕರಿಗೆ ನೋಟಿಸ್‌ಗಳನ್ನು ನೀಡಿ ವಿದ್ಯುತ್ ಸಂಬಂಧಿತ ಸುರಕ್ಷತಾ ಕ್ರಮಗಳ ಕುರಿತು ಸಭೆಗಳನ್ನು ನಡೆಸಿ ಜಾಗೃತಿ ಮೂಡಿಸಲಾಗುತ್ತದೆ.<br>ಆದಾಗ್ಯೂ, ಸಂಭಾವ್ಯ ವಿದ್ಯುತ್ ಸಂಬಂಧಿತ ದುರ್ಘಟನೆಗಳ ಬಗ್ಗೆ ಲಭ್ಯವಿರುವ ಮಾಹಿತಿಗಳನ್ನು ನೀಡಿದ್ದಲ್ಲಿ ಸ್ಥಳ ಪರಿಶೀಲನೆ ಮಾಡಿ ನಿಯಮಾನುಸಾರ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>**<u>ವಿದ್ಯುತ್ ಸರಬರಾಜು ಕಂಪನಿಗಳು:</u>**<br>ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಹಲವು ಅಪಾಯಕಾರಿ ಸ್ಥಳಗಳನ್ನು (Hazardous location) ಈಗಾಗಲೇ ಪತ್ತೆ ಮಾಡಿ ಸುರಕ್ಷತೆ ದೃಷ್ಟಿಯಿಂದ ಸದರಿ ಅಪಾಯಕಾರಿ ಸ್ಥಳಗಳನ್ನು ಸರಿಪಡಿಸಲು ದುರಸ್ತಿ ಮತ್ತು ನಿರ್ವಹಣೆ ಕಾಮಗಾರಿಯಡಿ 11 ಕೆ.ವಿ. / LT ಮಾರ್ಗಗಳ ನಿರ್ವಹಣೆ (ಹಳೆಯದಾದ ಮತ್ತು ಶಿಥಿಲಗೊಂಡಿರುವ ಹೆಚ್.ಟಿ ಮತ್ತು ಎಲ್.ಟಿ. ವಿದ್ಯುತ್ ವಾಹಕಗಳನ್ನು ಬದಲಾಯಿಸುವುದು / ಉನ್ನತೀಕರಿಸುವುದು, ಜೋತುಬಿದ್ದ ವಿದ್ಯುತ್ ವಾಹಕಗಳನ್ನು ಬಿಗಿಗೊಳಿಸುವುದು ಹಾಗೂ ಮಧ್ಯಂತರ ಕಂಬಗಳನ್ನು ನಿಯಮಾನುಸಾರ ಅಳವಡಿಸುವುದು), ಪರಿವರ್ತಕಗಳ ನಿರ್ವಹಣೆ ಕಾಮಗಾರಿಗಳನ್ನು ನಿರ್ವಹಿಸಿ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>ಆದಾಗ್ಯೂ, ಸಂಭಾವ್ಯ ವಿದ್ಯುತ್ ಸಂಬಂಧಿತ ದುರ್ಘಟನೆಗಳ ಬಗ್ಗೆ ಲಭ್ಯವಿರುವ ಮಾಹಿತಿಗಳನ್ನು ನೀಡಿದ್ದಲ್ಲಿ ಆದ್ಯತೆಯ ಮೇರೆಗೆ ಕಂಪನಿಯ ನಿಯಮವಾನುಸಾರ ಸ್ಥಳ ಪರಿವೀಕ್ಷಣೆ ಮಾಡಿ ಅಗತ್ಯ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. |
| ಈ) | ಕರ್ನಾಟಕ ರಾಜ್ಯದ ವಿದ್ಯುತ್ ಶಕ್ತಿ ಪ್ರಸರಣ ನಿಗಮಗಳು ತಮ್ಮ ನಿಗಮಗಳ ವ್ಯಾಪ್ತಿಯಲ್ಲಿ ವಿದ್ಯುತ್ ಸ್ಥಾವರ ಮತ್ತು ವಿತರಣ ಜಾಲಗಳ ಸುರಕ್ಷತೆ ಕುರಿತು ಸಮಗ್ರವಾಗಿ ಏನೇನು ಸುಧಾರಣಾ ಕ್ರಮಗಳನ್ನು ವಹಿಸುತ್ತಿವೆ? (ವಿವರ ನೀಡುವುದು) | ಕವಿಪ್ರನಿನಿ ಮತ್ತು ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ವಿದ್ಯುತ್ ಸ್ಥಾವರ ಮತ್ತು ವಿತರಣ ಜಾಲಗಳ ಸುರಕ್ಷತೆ ಕುರಿತು ಕೈಗೊಳ್ಳುತ್ತಿರುವ ಕ್ರಮಗಳ ವಿವರಗಳನ್ನು **ಅನುಬಂಧ-2**ರಲ್ಲಿ ಒದಗಿಸಲಾಗಿದೆ. |

ಸಂಖ್ಯೆ: ಎನರ್ಜಿ 333 ಇಬಿಎಸ್ 2024

(ಕೆ.ಜೆ.ಜಾರ್ಜ್)
ಇಂಧನ ಸಚಿವರು

## ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 104ಕ್ಕೆ ಅನುಬಂಧ-1:-

**ಕಳೆದ ಮೂರು ವರ್ಷಗಳಲ್ಲಿ ( 2021-22, 2022-23 ಮತ್ತು 2023-24) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕ.ವಿ.ಪ್ರ.ನಿ.ನಿ. ಮತ್ತು ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯಲ್ಲಿ ವಿದ್ಯುತ್ ಅವಘಢದಿಂದ ಮರಣ ಹೊಂದಿದ ಪ್ರಕರಣಗಳು, ಗಾಯಗೊಂಡಿರುವ ಪ್ರಕರಣಗಳು, ಸದರಿ ದುರ್ಘಟನೆಗಳಿಗೆ ಕಾರಣಗಳು ಮತ್ತು ಪರಿಹಾರ ಧನವನ್ನು ವಿತರಿಸಲಾಗಿರುವ ಪ್ರಕರಣಗಳ ವಿವರಗಳು:-**

ಕ.ವಿ.ಪ್ರ.ನಿ.ನಿ :

| ಕ್ರ.ಸಂ | ಆರ್ಥಿಕ ವರ್ಷ | ಜಿಲ್ಲೆ ಹೆಸರು | ಮರಣ ಹೊಂದಿದ ಪ್ರಕರಣಗಳ ಸಂಖ್ಯೆ | | | ಗಾಯಗೊಂಡಿರುವ ಪ್ರಕರಣಗಳ ಸಂಖ್ಯೆ | | | ಪ್ರಾಣಿಗಳು | ಒಟ್ಟು ಪ್ರಕರಣಗಳು | ಪರಿಹಾರಧನ ವಿತರಿಸಲಾದ ಪ್ರಕರಣಗಳ ಸಂಖ್ಯೆ | | ಪರಿಹಾರ ಮೊತ್ತ (ಮಾನವ+ ಪ್ರಾಣಿ) | ವಿದ್ಯುತ್ ಅಪಘಾತದ ಕಾರಣಗಳು | ಷರಾ |
|---|---|---|---|---|---|---|---|---|---|---|---|---|---|---|---|
| | | | ಇಲಾಖೆ | ಇಲಾಖೇತರ | ಒಟ್ಟು ಪ್ರಕರಣಗಳು | ಇಲಾಖೆ | ಇಲಾಖೇತರ | ಒಟ್ಟು ಪ್ರಕರಣಗಳು | | | ಮಾನವ | ಪ್ರಾಣಿ | | | |
| 1 | 2021-22 | ದಕ್ಷಿಣ ಕನ್ನಡ | 0 | 0 | 0 | 0 | 0 | 0 | 0 | 0 | 0 | 0 | 0 | - | - |
| | | ಉಡುಪಿ | 0 | 0 | 0 | 1 | 0 | 1 | 0 | 1 | 0 | 0 | 0 | 110 ಕೆ.ವಿ. ಹಿರಿಯಡ್ಕ ವಿದ್ಯುತ್ ವಿತರಣಾ ಕೇಂದ್ರದಲ್ಲಿ 11ಕೆವಿ ಆಕ್ಸಿಲರಿ ಮಾರ್ಗದ ವಾಲ್ ಎಂಟ್ರಿ ಬುಶ್ಶಿಂಗ್ ಫ್ಲಾಶ್ ಓವರ್ ಆದ ಕಾರಣ ಅದನ್ನು ರಿಪೇರಿ ಮಾಡುವ ಸಂದರ್ಭದಲ್ಲಿ ಮೆಕ್ಯಾನಿಕ್ ದರ್ಜೆ-2 ರವರು ಆಕಸ್ಮಿಕವಾಗಿ ಆರ್ಕಿಂಗ್ ಝೋನ್ ಪ್ರವೇಶಿಸಿದ ಕಾರಣ ಮಾರಣಾಂತಿಕವಲ್ಲದ ಲಘು ವಿದ್ಯುತ್ ಅಪಘಾತ ಸಂಭವಿಸಿರುತ್ತದೆ. ಸದರಿಯವರಿಗೆ ಕೂಡಲೇ ಚಿಕಿತ್ಸೆ ನೀಡಲಾಗಿರುತ್ತದೆ. | ಲಘು ಅಪಘಾತವಾದ ಕಾರಣ ಯಾವುದೇ ರೀತಿಯ ಪರಿಹಾರ ಧನವನ್ನು ನೀಡಿರುವುದಿಲ್ಲ. |
| 2 | 2022-23 | ದಕ್ಷಿಣ ಕನ್ನಡ | 0 | 0 | 0 | 0 | 0 | 0 | 0 | 0 | 0 | 0 | 0 | - | - |
| | | ಉಡುಪಿ | 0 | 0 | 0 | 0 | 0 | 0 | 0 | 0 | 0 | 0 | 0 | - | - |

| | | | | | | | | | | | | | | |
|---|---|---|---|---|---|---|---|---|---|---|---|---|---|---|
| 3 | 2023-24 | ದಕ್ಷಿಣ ಕನ್ನಡ | 0 | 1 | 1 | 0 | 0 | 0 | 0 | 1 | 0 | 0 | 0 | 110 ಕೆವಿ ಕಾವೂರು- ಕೊಣಾಜೆ ವಿದ್ಯುತ್ ಮಾರ್ಗವು ಟ್ರಿಪ್ ಆದ ಸಂಬಂಧ ಕುಲಶೇಖರ ಪ್ರಸರಣ ಮಾರ್ಗದ ಕಿರಿಯ ಇಂಜಿನಿಯರ್ (ವಿ) ರವರು ಮಾರ್ಗ ಪರಿವೀಕ್ಷಣೆ ನಡೆಸುತ್ತಾ, ಸ್ಥಳೀಯವಾಗಿ ವಿಚಾರಿಸಿದಾಗ ಶ್ರೀ. ಜೈನುದ್ದೀನ್, ಬಿನ್ ಬಿ ಅಬ್ದುಲ್ ರೆಹಮಾನ್ (47 ವರ್ಷ) ಎಂಬುವವರು ಹೆನ್ರಿ ಸಿಕ್ವೇರಾ ಇವರ ಮನೆಯ ಪೈಂಟಿಂಗ್ ಮಾಡುವ ವೇಳೆ ಕಬ್ಬಿಣ ಏಣಿಯನ್ನು ಮನೆಯ ಮೊದಲನೇ ಮಹಡಿಗೆ ಎಳೆಯುವ ಸಂದರ್ಭ, ಸದರಿಯವರ ನಿರ್ಲಕ್ಷ್ಯದಿಂದ ಏಣಿಯು ಆರ್ಕಿಂಗ್ ಝೋನ್ ಪ್ರವೇಶಿಸಿದ್ದು, ಶ್ರೀ. ಜೈನುದ್ದೀನ್ ರವರು ಮೊದಲನೇ ಮಹಡಿಯಿಂದ ಕೆಳಗೆ ಬಿದ್ದ ಕಾರಣ Mechanical injury ಆಗಿ ಆಸ್ಪತ್ರೆಗೆ ದಾಖಲಾಗಿರುತ್ತಾರೆ. ಚಿಕಿತ್ಸೆ ಫಲಕಾರಿಯಾಗದೆ ಮರಣ ಹೊಂದಿರುತ್ತಾರೆ. | ಶ್ರೀ. ಜೈನುದ್ದೀನ್ ರವರು ಇಲಾಖೇತರ ವ್ಯಕ್ತಿಯಾಗಿದ್ದು, ಸದರಿಯವರ ನಿರ್ಲಕ್ಷ್ಯದಿಂದ ಅಪಘಾತ ಸಂಭವಿಸಿರುತ್ತದೆ ಮತ್ತು ವಿದ್ಯುತ್ ಪರಿವೀಕ್ಷಕರ ವರದಿಯನ್ವಯ ಸದರಿ ಪ್ರಕರಣದಲ್ಲಿ ಮೃತರ ಕುಟುಂಬಕ್ಕೆ ನಿಗಮದಿಂದ ಪರಿಹಾರ ಧನವನ್ನು ನೀಡಿರುವುದಿಲ್ಲ. |
| | | ಉಡುಪಿ | 0 | 0 | 0 | 0 | 0 | 0 | 0 | 0 | 0 | 0 | 0 | - | - |

ಮಂಗಳೂರು ವಿದ್ಯುತ್ ಸರಬರಾಜು ಕಂಪನಿ:

| ಕ್ರ.ಸಂ | ಆರ್ಥಿಕ ವರ್ಷ | ಜಿಲ್ಲೆ ಹೆಸರು | ಮರಣ ಹೊಂದಿದ ಪ್ರಕರಣಗಳ ಸಂಖ್ಯೆ | | | ಗಾಯಗೊಂಡಿರುವ ಪ್ರಕರಣಗಳ ಸಂಖ್ಯೆ | | | ಪ್ರಾಣಿಗಳು | ಒಟ್ಟು ಪ್ರಕರಣಗಳು | ಪರಿಹಾರಧನ ವಿತರಿಸಲಾದ ಪ್ರಕರಣಗಳ ಸಂಖ್ಯೆ | | ಪರಿಹಾರ ಮೊತ್ತ (ಮಾನವ+ ಪ್ರಾಣಿ) | ವಿದ್ಯುತ್ ಅಪಘಾತದ ಕಾರಣಗಳು | ಷರಾ |
|---|---|---|---|---|---|---|---|---|---|---|---|---|---|---|---|
| | | | ಇಲಾಖೆ | ಇಲಾಖೇತರ | ಒಟ್ಟು ಪ್ರಕರಣಗಳು | ಇಲಾಖೆ | ಇಲಾಖೇತರ | ಒಟ್ಟು ಪ್ರಕರಣಗಳು | | | ಮಾನವ | ಪ್ರಾಣಿ | | | |
| 1 | 2021-22 | ದಕ್ಷಿಣ ಕನ್ನಡ | 1 | 12 | **13** | 4 | 5 | 9 | 11 | **33** | 2 | 11 | (120000 + 271000) = 391000 | • ವಾಹಕ ತುಂಡಾಗಿ -2 ಸಂಖ್ಯೆ<br>• ಏಣಿ ವಿದ್ಯುತ್ ಸಂಪರ್ಕಕ್ಕೆ ಬಂದು - 2 ಸಂಖ್ಯೆ<br>• ವಿದ್ಯುತ್ ಲೀಕೇಜ್ - 2 ಸಂಖ್ಯೆ<br>• ಇತರೆ 27 ಸಂಖ್ಯೆ ಪ್ರಕರಣಗಳು ಆಕಸ್ಮಿಕವಾಗಿ ಕೆಲಸ ನಿರ್ವಹಿಸುವಾಗ ವಿದ್ಯುತ್ ಸಂಪರ್ಕಕ್ಕೆ ಒಳಗೊಂಡು ಆಗಿರುವ ಪ್ರಕರಣಗಳು ಆಗಿರುತ್ತದೆ. | ಉಳಿದ ಪ್ರಕರಣದಲ್ಲಿ ಪರಿಹಾರ ಕೋರಿರುವುದಿಲ್ಲ./ ಪರಿಹಾರ ನೀಡುವ ಪ್ರಕರಣ ಆಗಿರುವುದಿಲ್ಲ. |
| | | ಉಡುಪಿ | 0 | 5 | **5** | 2 | 3 | 5 | 6 | **16** | 2 | 6 | (600000 + 149000) - 749000 | • ವಾಹಕ ತುಂಡಾಗಿ -5 ಸಂಖ್ಯೆ<br>• ಏಣಿ ವಿದ್ಯುತ್ ಸಂಪರ್ಕಕ್ಕೆ ಬಂದು -1 ಸಂಖ್ಯೆ<br>• ಮನೆ ಒಳಗಿನ ಆಂತರಿಕ ಸಮಸ್ಯೆ - 1 ಸಂಖ್ಯೆ<br>• ಕಾಂಕ್ರೀಟ್ ಸ್ಲ್ಯಾಬ್ ಹಾಕುವಾಗ - 1 ಸಂಖ್ಯೆ<br>• ಬ್ಯಾನರ್ ಕಟ್ಟುವಾಗ - 1 ಸಂಖ್ಯೆ<br>• ವಿದ್ಯುತ್ ಲೀಕೇಜ್ - 2 ಸಂಖ್ಯೆ<br>• ಇತರೆ 05 ಸಂಖ್ಯೆ ಪ್ರಕರಣಗಳು ಆಕಸ್ಮಿಕವಾಗಿ ಕೆಲಸ ನಿರ್ವಹಿಸುವಾಗ ವಿದ್ಯುತ್ ಸಂಪರ್ಕಕ್ಕೆ ಒಳಗೊಂಡು ಆಗಿರುವ ಪ್ರಕರಣಗಳು ಆಗಿರುತ್ತದೆ. | |

| | | | | | | | | | | | | | | | |
|---|---|---|---|---|---|---|---|---|---|---|---|---|---|---|---|
| 2 | 2022-23 | ದಕ್ಷಿಣ ಕನ್ನಡ | 1 | 16 | **17** | 3 | 6 | **9** | 14 | **40** | 3 | 14 | (300000 + 415000) = 715000 | • ಏಬಿ ವಿದ್ಯುತ್ ಸಂಪರ್ಕಕ್ಕೆ ಬಂದು - 3 ಸಂಖ್ಯೆ<br>• ವಿದ್ಯುತ್ ಲೀಕೇಜ್ - 1 ಸಂಖ್ಯೆ<br>• ಇತರೆ 36 ಸಂಖ್ಯೆ ಪ್ರಕರಣಗಳು ಆಕಸ್ಮಿಕವಾಗಿ ಕೆಲಸ ನಿರ್ವಹಿಸುವಾಗ ವಿದ್ಯುತ್ ಸಂಪರ್ಕಕ್ಕೆ ಒಳಗೊಂಡು ಆಗಿರುವ ಪ್ರಕರಣಗಳು ಆಗಿರುತ್ತದೆ. | |
| | | ಉಡುಪಿ | 0 | 5 | **5** | 0 | 2 | **2** | 12 | **19** | 3 | 9 | (700000 + 235000) = 935000 | • ವಾಹಕ ತುಂಡಾಗಿ - 11 ಸಂಖ್ಯೆ<br>• ಏಬಿ ವಿದ್ಯುತ್ ಸಂಪರ್ಕಕ್ಕೆ ಬಂದು - 2 ಸಂಖ್ಯೆ<br>• ಮರ ಕಡಿಯುವಾಗ - 1 ಸಂಖ್ಯೆ<br>• ಮಾವಿನ ಹಣ್ಣು ಕೊಯ್ಯುವಾಗ - 1 ಸಂಖ್ಯೆ<br>• ವಿದ್ಯುತ್ ಲೀಕೇಜ್ - 2 ಸಂಖ್ಯೆ<br>• ಇತರೆ 02 ಸಂಖ್ಯೆ ಪ್ರಕರಣಗಳು ಆಕಸ್ಮಿಕವಾಗಿ ಕೆಲಸ ನಿರ್ವಹಿಸುವಾಗ ವಿದ್ಯುತ್ ಸಂಪರ್ಕಕ್ಕೆ ಒಳಗೊಂಡು ಆಗಿರುವ ಪ್ರಕರಣಗಳು ಆಗಿರುತ್ತದೆ. | ಉಳಿದ ಪ್ರಕರಣದಲ್ಲಿ ಪರಿಹಾರ ಕೋರಿರುವುದಿಲ್ಲ./ಪರಿಹಾರ ನೀಡುವ ಪ್ರಕರಣ ಆಗಿರುವುದಿಲ್ಲ. |
| | 2023-24 | ದಕ್ಷಿಣ ಕನ್ನಡ | 2 | 10 | **12** | 7 | 2 | **9** | 9 | **30** | 2 | 9 | (1100000 + 120000) = 1220000 | • ವಾಹಕ ತುಂಡಾಗಿ - 1 ಸಂಖ್ಯೆ<br>• ಮರ ಕಡಿಯುವಾಗ - 1 ಸಂಖ್ಯೆ<br>• ವಿದ್ಯುತ್ ಲೀಕೇಜ್ - 2 ಸಂಖ್ಯೆ<br>• ಇತರೆ 26 ಸಂಖ್ಯೆ ಪ್ರಕರಣಗಳು ಆಕಸ್ಮಿಕವಾಗಿ ಕೆಲಸ ನಿರ್ವಹಿಸುವಾಗ ವಿದ್ಯುತ್ ಸಂಪರ್ಕಕ್ಕೆ ಒಳಗೊಂಡು ಆಗಿರುವ ಪ್ರಕರಣಗಳು ಆಗಿರುತ್ತದೆ. | |

n)

| | | | | | | | | | | | | | | | |
|---|---|---|---|---|---|---|---|---|---|---|---|---|---|---|---|
| | | ಉಡುಪಿ | 2 | 8 | **10** | 6 | 1 | 7 | 5 | **22** | 5 | 4 | (1700000 + 117000) = 1817000 | • ವಾಹಕ ತುಂಡಾಗಿ - 6 ಸಂಖ್ಯೆ<br>• ಏಣಿ ವಿದ್ಯುತ್ ಸಂಪರ್ಕಕ್ಕೆ ಬಂದು -4 ಸಂಖ್ಯೆ<br>• ಪರಿವರ್ತಕದ ಕೆಲಸ ನಿರ್ವಹಿಸುವಾಗ - 2 ಸಂಖ್ಯೆ<br>• ವಿದ್ಯುತ್ ಕೆಲಸ ನಿರ್ವಹಿಸುವಾಗ - 2 ಸಂಖ್ಯೆ<br>• ವಿದ್ಯುತ್ ಲೀಕೇಜ್ - 2 ಸಂಖ್ಯೆ<br>• ಇತರೆ 06 ಸಂಖ್ಯೆ ಪ್ರಕರಣಗಳು ಆಕಸ್ಮಿಕವಾಗಿ ಕೆಲಸ ನಿರ್ವಹಿಸುವಾಗ ವಿದ್ಯುತ್ ಸಂಪರ್ಕಕ್ಕೆ ಒಳಗೊಂಡು ಆಗಿರುವ ಪ್ರಕರಣಗಳು ಆಗಿರುತ್ತದೆ. | ಉಳಿದ ಪ್ರಕರಣದಲ್ಲಿ ಪರಿಹಾರ ಕೋರಿರುವುದಿಲ್ಲ./ಪರಿಹಾರ ನೀಡುವ ಪ್ರಕರಣ ಆಗಿರುವುದಿಲ್ಲ. |

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 104ಕ್ಕೆ ಅನುಬಂಧ-2:-**

**ಕವಿಪ್ರನಿನಿ ಮತ್ತು ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ವಿದ್ಯುತ್ ಸ್ಥಾವರ ಮತ್ತು ವಿತರಣ ಜಾಲಗಳ ಸುರಕ್ಷತೆ ಕುರಿತು ಕೈಗೊಳ್ಳುತ್ತಿರುವ ಕ್ರಮಗಳ ವಿವರಗಳು.**

**ಕವಿಪ್ರನಿನಿ:**

- ಕವಿಪ್ರನಿನಿ ವತಿಯಿಂದ ಸುರಕ್ಷಾ ಉಪಕರಣಗಳನ್ನು ಎಲ್ಲಾ ವಿದ್ಯುತ್ ವಿತರಣಾ ಕೇಂದ್ರ ಮತ್ತು ಸ್ವೀಕರಣಾ ಕೇಂದ್ರಗಳಿಗೆ ಒದಗಿಸಲಾಗಿದೆ. ಮತ್ತು ಯಾವುದೇ ಕೆಲಸ ನಿರ್ವಹಿಸುವಾಗ ಅರ್ಥಿಂಗ್ ವಲಯವನ್ನು ರಚಿಸಿ ಕೆಲಸ ಮಾಡಲು ಸೂಚಿಸಲಾಗಿದೆ. ವಿದ್ಯುತ್ ಅವಘಡ ತಡೆಗಟ್ಟಲು ಎಲ್ಲಾ ಸಿಬ್ಬಂದಿಗಳಿಗೂ ತರಬೇತಿಯನ್ನು ನೀಡಲಾಗಿದೆ. ವಿ.ವಿ.ಕೇಂದ್ರ ಮತ್ತು ಸ್ವೀಕರಣಾ ಕೇಂದ್ರಗಳಲ್ಲಿ ತ್ರೈಮಾಸಿಕ ನಿರ್ವಹಣೆಯನ್ನು ತಪ್ಪದೆ ಮಾಡಲಾಗುತ್ತಿದೆ.
- ಕವಿಪ್ರನಿನಿ ವತಿಯಿಂದ ಈಗಾಗಲೇ ಹಲವು ಬಾರಿ ವಿದ್ಯುತ್ ಪ್ರಸರಣ ಮಾರ್ಗಗಳ ಕೆಳಗೆ / ಸನಿಹದಲ್ಲಿ ಅನಧಿಕೃತವಾಗಿ/ನಿಯಮಬಾಹಿರವಾಗಿ ಕಟ್ಟಿರುವ ಕಟ್ಟಡದ ಮಾಲೀಕರಿಗೆ ಸೂಚನಾ ಪತ್ರಗಳನ್ನು ನೀಡಲಾಗಿರುತ್ತದೆ ಹಾಗೂ ಸಾರ್ವಜನಿಕ ಸ್ಥಳಗಳು ಹಾಗೂ ಶಾಲಾ ಕಾಲೇಜುಗಳಲ್ಲಿ ವಿದ್ಯುತ್ ಅಪಘಾತಗಳಿಂದ ಉಂಟಾಗುವ ಪ್ರಾಣಹಾನಿ/ಆಸ್ತಿಪಾಸ್ತಿ ನಷ್ಟಗಳ ಕುರಿತು ಹಾಗೂ ಅವುಗಳನ್ನು ತಡೆಗಟ್ಟುವ ಬಗ್ಗೆ ಜನಜಾಗೃತಿ ಮೂಡಿಸಲಾಗುತ್ತಿದೆ.
- ವಿದ್ಯುತ್ ಸುರಕ್ಷತಾ ನಿಯಮಾವಳಿಗಳನ್ನು ವಿದ್ಯುತ್ ಸುರಕ್ಷತೆಯನ್ನು ಕಾಪಾಡಲು ಅರಿವು ಮೂಡಿಸಿ ಭಿತ್ತಿ ಪತ್ರಗಳನ್ನು ಸಹ ಹಂಚಲಾಗುತ್ತಿರುತ್ತದೆ.
- ಕನ್ನಡ ಮತ್ತು ಇಂಗ್ಲೀಷ್ ದಿನಪತ್ರಿಕೆಗಳಲ್ಲಿ ಸುರಕ್ಷತೆಯ ದೃಷ್ಟಿಯಿಂದ ಸಾರ್ವಜನಿಕ ಪ್ರಕಟಣೆಗಳನ್ನು ಸಹ ಕಾಲ ಕಾಲಕ್ಕೆ ಹೊರಡಿಸಿ ಹಾಗೂ ವಿದ್ಯುತ್ ಪ್ರಸರಣ ಮಾರ್ಗಗಳ ಕೆಳಗೆ/ಸನಿಹದಲ್ಲಿ ಅನಧಿಕೃತವಾಗಿ/ನಿಯಮಬಾಹಿರವಾಗಿ ಕಟ್ಟಿರುವ ಕಟ್ಟಡಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕೆಂದು ಬಿ.ಬಿ.ಎಂ.ಪಿ ಅಧಿಕಾರಿಗಳಿಗೆ ಮತ್ತು ವಿದ್ಯುತ್ ಪ್ರಸರಣ ಮಾರ್ಗದ ಕೆಳಗೆ/ಸನಿಹದಲ್ಲಿ ಕಟ್ಟಿರುವ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸದಂತೆ ಕ್ರಮ ಕೈಗೊಳ್ಳಬೇಕೆಂದು ಅಧಿಕಾರಿಗಳಿಗೆ ಆಗಿಂದಾಗ್ಗೆ ಪತ್ರ ಬರೆಯಲಾಗಿರುತ್ತದೆ.
- ದಿನಾಂಕ: 26.06.2024 ರಿಂದ 02.07.2024 ರವರೆಗೆ "National Electrical Safety Week 2024" ಕಾರ್ಯಕ್ರಮವನ್ನು ಸಾರ್ವಜನಿಕರ ಸುರಕ್ಷತೆ ಹಿತದೃಷ್ಟಿಯಿಂದ ಸಾರ್ವಜನಿಕ ಸ್ಥಳಗಳಲ್ಲಿ ಹಾಗೂ ಶಾಲಾ ಕಾಲೇಜುಗಳಲ್ಲಿ ಹಮ್ಮಿಕೊಳ್ಳಲಾಗಿರುತ್ತದೆ.
- ವಿದ್ಯುತ್ ಅಪಘಾತಗಳನ್ನು ತಡೆಯಲು ಸರ್ಕಾರವು ವಿದ್ಯುತ್ ಪ್ರಸರಣ ಜಾಲದಲ್ಲಿ ವೈಜ್ಞಾನಿಕ ಪದ್ಧತಿಗಳನ್ನು ಅನುಸರಿಸಲಾಗುತ್ತಿದೆ.
- ತಾಂತ್ರಿಕ ಸಮನ್ವಯ ಸಮಿತಿ ಸಭೆಯಲ್ಲಿ ಅನುಮತಿ ಪಡೆದ ಹಳೆಯದಾಗಿರುವ ತಂತಿಯನ್ನು ಬದಲಾಯಿಸುವ ಕಾಮಗಾರಿಯನ್ನು ನಿರ್ವಹಿಸಲಾಗುತ್ತದೆ.
- ವಿದ್ಯುತ್ ಪ್ರಸರಣ ಮಾರ್ಗದ ಕಾರಿಡಾರ್ ಸಂಬಂಧಿಸಿದಂತೆ ಅಳತೆಯನ್ನು ನಿಗದಿಪಡಿಸಿದ್ದು, ಸದರಿ ಅಳತೆಯಲ್ಲಿ ಬರುವ ಗಿಡ/ಮರಗಳ ತೆರವಿಗೆ ಕ್ರಮವಹಿಸಲಾಗುತ್ತಿದೆ.
- ವಿದ್ಯುತ್ ಅಪಘಾತವನ್ನು ತಡೆಗಟ್ಟಲು ನಮ್ಮ ನೌಕರ ಸಿಬ್ಬಂಧಿಗಳು ಮಾರ್ಗ ಮುಕ್ತತೆ ಪಡೆದು ಸುರಕ್ಷಿತ ವಲಯದಲ್ಲಿ ಸುರಕ್ಷಿತಾ ವಸ್ತುಗಳೊಂದಿಗೆ ಕೆಲಸವನ್ನು ಸುರಕ್ಷತೆಯಿಂದ ಪೂರ್ಣಗೊಳಿಸುತ್ತಾರೆ.

**ವಿದ್ಯುತ್ ಸರಬರಾಜು ಕಂಪನಿಗಳು:-**

- ಬೆ.ವಿ.ಕಂ. ವತಿಯಿಂದ ಹಳೆಯ ವಿದ್ಯುತ್ ಮಾರ್ಗಗಳನ್ನು ಬದಲಾಯಿಸಿ ಸಂದರ್ಭಕ್ಕೆ ಅನುಸಾರವಾಗಿ 11 ಕೆವಿ ಓವರ್ ಹೆಡ್ ಲೈನ್ ನ್ನು ಭೂಗತ ಕೇಬಲ್ ಗಳನ್ನಾಗಿ ಹಾಗೂ LT ಓವರ್ ಹೆಡ್ ಲೈನ್ ನ್ನು Arial Bunched ಕೇಬಲ್ ಆಗಿ ಬದಲಾಯಿಸಲಾಗಿದೆ.
- ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಪಾದಚಾರಿ ಮಾರ್ಗಗಳಲ್ಲಿ ಇರುವಂತಹ ವಿದ್ಯುತ್ ಪರಿವರ್ತಕಗಳನ್ನು ಸ್ಥಳಾಂತರಿಸುವುದು/ನೂತನ ಪರಿವರ್ತಕ ಸ್ಟ್ರಕ್ಚರ್ ಗೆ ಪರಿವರ್ತಿಸುವುದು.
- ಅಪಾಯಕಾರಿ ಸ್ಥಿತಿಯಲ್ಲಿರುವಂತಹ ಮಾರ್ಗಗಳನ್ನು ಗುರುತಿಸಿ ಸೂಕ್ತ ಕ್ರಮ ಕೈಗೊಂಡು ಎಲ್ಲಾ ಕ್ಷೇತ್ರಾಧಿಕಾರಿಗಳಿಗೆ ಮಾರ್ಗ ಸೂಚಿಗಳನ್ನು ನೀಡಿದ್ದು, ಅದರಂತೆ ಸರಿಪಡಿಸಲಾಗಿರುತ್ತದೆ.
- ಶಾಲಾ ಕಾಲೇಜುಗಳ ಮೇಲೆ ಹಾದು ಹೋಗಿರುವ 11 ಕೆವಿ ವಿತರಣಾ ವ್ಯವಸ್ಥೆಯನ್ನು ಸೂಕ್ತ ಸ್ಥಳಕ್ಕೆ ಸ್ಥಳಾಂತರಗೊಳಿಸಲಾಗಿದೆ.

- ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ವಿದ್ಯುತ್ ವಿತರಣಾ ಜಾಲದ ನಿಯತಕಾಲಿಕ ನಿರ್ವಹಣೆಯನ್ನು ನಿಯಮಿತವಾಗಿ ಕೈಗೊಳ್ಳಲಾಗುತ್ತಿದ್ದು, ಜೋತು ಬಿದ್ದ ವಾಹಕಗಳಿಗೆ ಹಾಗೂ ಕಂಬಗಳ ಅಂತರ ಹೆಚ್ಚಾಗಿದ್ದಲ್ಲಿ ಮಧ್ಯಂತರ ಕಂಬಗಳನ್ನು ಅಳವಡಿಸಲು ಕ್ರಮ ವಹಿಸಲಾಗುತ್ತಿದೆ. ಕಿತ್ತು ಹೋಗಿರುವ ಗೈ ಸೆಟ್ ನ್ನು ಮರು ಅಳವಡಿಸುವುದು, ವಾಲಿರುವ ಕಂಬಗಳನ್ನು ನೇರಗೊಳಿಸುವುದು, ವಿದ್ಯುತ್ ಮಾರ್ಗಗಳಿಗೆ ತಗಲುವ/ಅಡ್ಡಲಾಗಿರುವ ಗಿಡಮರಗಳ ಕೊಂಬೆ/ಬಳ್ಳಿಗಳನ್ನು ಕತ್ತರಿಸುವುದು, ಹಾಳಾಗಿರುವ ವಿದ್ಯುತ್ ಮಾರ್ಗದ ಜಂಪ್ ಗಳನ್ನು ಬದಲಾಯಿಸುವುದು ಹಾಗೂ ಶಿಥಿಲಗೊಂಡ ಕಂಬಗಳು/ ವಾಹಕಗಳು/ ನಿರೋಧಕಗಳು ಮತ್ತು ಇತರೆ ವಿದ್ಯುತ್ ಸಲಕರಣೆಗಳನ್ನು ಆದ್ಯತೆಯ ಮೇರೆಗೆ ಬದಲಾಯಿಸಲಾಗುತ್ತಿದೆ.
- ಪ್ರತಿ ಮೂರು ತಿಂಗಳಿಗೊಮ್ಮೆ ತ್ರೈಮಾಸಿಕ ನಿರ್ವಹಣೆ ಮಾಡಲಾಗುತ್ತಿದ್ದು, ಅವಶ್ಯಕತೆ ಕಂಡುಬಂದಲ್ಲಿ ಹೆಚ್ಚುವರಿ ಪರಿವರ್ತಕ ಅಳವಡಿಸುವುದು, ವಾಹಕ ಬದಲಾವಣೆ ಮಾಡುವುದು ಮತ್ತು ಮಾರ್ಗ ಬಲವರ್ಧನೆಯ ಕಾರ್ಯಗಳನ್ನು ಮಾಡಲಾಗುತ್ತಿದೆ.

**ಸಾರ್ವಜನಿಕರಿಗೆ ವಿದ್ಯುತ್ ಅವಘಡಗಳ ಬಗ್ಗೆ ಮುನ್ನೆಚ್ಚರಿಕೆ ವಹಿಸುವಂತೆ ಜಾಗೃತಿ ಮೂಡಿಸಲು ಈ ಕೆಳಕಂಡ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ:**

- ಪ್ರತಿ ಮೂರನೇ ಶನಿವಾರದಂದು ನಡೆಸುವ ಗ್ರಾಹಕರ ಸಂವಾದ ಸಭೆಯಲ್ಲಿ ವಿದ್ಯುತ್ ಅಪಘಾತಗಳ ಬಗ್ಗೆ ಸಾರ್ವಜನಿಕರಿಗೆ ವ್ಯಾಪಕವಾಗಿ ಅರಿವು ಮೂಡಿಸಲಾಗುತ್ತಿದೆ ಹಾಗೂ ವಿದ್ಯುತ್ ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳಲು ಸೂಕ್ತ ಮಾಹಿತಿಯನ್ನು ಮತ್ತು ನಿರ್ದೇಶನಗಳನ್ನು ನೀಡಲಾಗುತ್ತಿದೆ.
- ವಿದ್ಯುತ್ ಬಗ್ಗೆ ಅರಿವು ಮೂಡಿಸಲು ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ಸರ್ಕಾರಿ ಶಾಲೆಗಳಲ್ಲಿ ಪ್ರಬಂಧ ಸ್ಪರ್ಧೆ, ಚಿತ್ರಕಲೆ ಮತ್ತು ಭಾಷಣ ಸ್ಪರ್ಧೆಗಳನ್ನು ಏರ್ಪಡಿಸಲಾಗಿರುತ್ತದೆ.
- ವಿದ್ಯುತ್ ಅಪಘಾತಗಳನ್ನು ತಡೆಗಟ್ಟಲು, ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಬೀದಿ ನಾಟಕ ಪ್ರದರ್ಶನ ಮಾಡಲಾಗಿರುತ್ತದೆ.
- ಸಾರ್ವಜನಿಕರಲ್ಲಿ ವಿದ್ಯುತ್ ಬಗ್ಗೆ ಅರಿವು ಮೂಡಿಸಲು ವಿಭಾಗ/ಉಪ-ವಿಭಾಗವಾರು ಸುರಕ್ಷತಾ ಮೆರವಣಿಗೆಗಳನ್ನು ಆಯೋಜಿಸಲಾಗಿದ್ದು, ಸಾರ್ವಜನಿಕರಿಗೆ ಕರಪತ್ರಗಳನ್ನು ವಿತರಿಸಲಾಗಿರುತ್ತದೆ.
- ಸಾರ್ವಜನಿಕರಲ್ಲಿ ವಿದ್ಯುತ್ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಕನ್ನಡ ಮತ್ತು ಇಂಗ್ಲಿಷ್ ದಿನಪತ್ರಿಕೆಗಳಲ್ಲಿ ಜಾಹೀರಾತು ಪ್ರಕಟಿಸಲಾಗಿದೆ.
- ರೇಡಿಯೋ ಮತ್ತು ಎಫ್‌ಎಂ ಚಾನೆಲ್ ಗಳಲ್ಲಿ ಆಡಿಯೋ ಜಿಂಗಲ್ ಗಳನ್ನು ಚಾನೆಲ್ ಗಳಲ್ಲಿ ಪ್ರಸಾರ ಮಾಡಲಾಗಿರುತ್ತದೆ.
- ಸಾರ್ವಜನಿಕರಲ್ಲಿ ವಿದ್ಯುತ್ ಬಗ್ಗೆ ಅರಿವು ಮೂಡಿಸಲು ಕಿರುಚಿತ್ರಗಳನ್ನು ಟೆಲಿವಿಷನ್ ಚಾನೆಲ್ ಗಳಲ್ಲಿ ಪ್ರಸಾರ ಮಾಡಲಾಗಿರುತ್ತದೆ.